ಶ್ರೀ ಎ. ಲಕ್ಷ್ಮೀಸಾಗರ್.--ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಈ ವಿಷಯಕ್ಕೆ ಸಂಬಂಧ ಪಟ್ಟಹಾಗೆ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಮಂತ್ರಿಯವರಿಂದ ಹೇಳಿಕೆ

ವಿಷಯ : ಯಶವಂತಪುರವ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಮೇಲೆ ಶ್ರೀ ಚಂದ್ರಶೇಖರ್ ದೂರು.

ಶ್ರೀ ಬಿ. ರಾಚಯ್ಯ (ಗೃಹಸಚಿವರು).--ಶ್ರೀ ಚಂದ್ರಶೇಖರ್‌ರವರು ರಜಮಾ ಎಂಬಾಕೆಯನ್ನು ಕಾರಿನಲ್ಲಿ ಕರೆದುಕೊಂಡು ಹೋಗಿ ಆಕೆಯೊಂದಿಗೆ ಅಶ್ಲೀಲ ಚಿತ್ರಗಳನ್ನು ತೆಗೆಸಿಕೊಂಡು ಆಕೆಯನ್ನು ಹೆದರಿಸುತ್ತಿದ್ದಾರೆಂದು ಆಕೆಯ ತಾಯಿ ಕೊಟ್ಟ ದೂರಿನ ಮೇರೆಗೆ 27-4-85ರಂದು ಒಂದು ಮೊಕದ್ದಮೆಯನ್ನು ದಾಖಲು ಮಾಡಲಾಗಿದೆ. ಈ ಬಗ್ಗೆ ತನಿಖೆ ಮುಗಿದಿದ್ದು, ಸಿಟಿ ಸಿವಿಲ್ ಹಷನ್ಸ್ ಜಡ್ಜ್ ನ್ಯಾಯಾಲಯದಲ್ಲಿ ಧೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ. 7-7-85ರಂದು ರಜಮಾ ತಾಯಿ ಸುಭದ್ರ ಇವರು ಚಂದ್ರಶೇಖರ್‌ರವರು ತನಗೇ ಹಾಗೂ ತನ್ನ ಮಗಳಿಗೆ ಬೆದರಿಕೆ ಹಾಕುತ್ತಿರುವವರು ಎಂದು ಕೊಟ್ಟ ದೂರಿನ ಮೇಲೆ ಚಂದ್ರಶೇಖರ್‌ರವರ ಮೇಲೆ ಮೊಕದ್ದಮೆಯನ್ನು ದಾಖಲು ಮಾಡಿಕೊಳ್ಳಲಾಗಿದೆ. 12-7-85ರಂದು ಶ್ರೀ ಬಿ. ಎಂ. ಚಂದ್ರಶೇಖರ್‌ರವರು ಡೆಪ್ಯೂಟಿ ಕಮಿಷನರ್, ವೆಸ್ಟ್ ಇವರಲ್ಲಿಗೆ ಬಂದು ಯಶವಂತಪುರ ಠಾಣೆ ಸಬ್ ಇನ್ಸ್‌ಪೆಕ್ಟರ್‌ರವರು ತನ್ನನ್ನು ಹೊಡೆದರೆಂದೂ ಹಾಗೂ ಅವಾಚ್ಯ ಶಬ್ದಗಳಿಂದ ಬೈದರೆಂದೂ ದೂರನ್ನು ಇತ್ತರು. ಈ ಬಗ್ಗೆ ತನಿಖೆ ಮಾಡಲಾಗಿ ಚಂದ್ರಶೇಖರ್‌ರವರ ಮೇಲೆ ಆಗಿರುವ ಗಾಯಗಳಿಗೂ ಯಶವಂತಪುರ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ರವರು ತನಗೆ ಹೊಡೆದರೆಂದು ಮಾಡಿರುವ ಆಪಾದನೆಗಳಿಗೂ ಯಾವುದೇ ಸಂಬಂಧವಿಲ್ಲವೆಂದು ತಿಳಿದುಬಂದಿದೆ. ಚಂದ್ರಶೇಖರ್‌ರವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಯಶವಂತಪುರ ಸರ್ಕಲ್ ಇನ್ಸ್‌ಪೆಕ್ಟರಿಂದ ಈ ಮೊಕದ್ದಮೆಯನ್ನು ಪರ್ಗಾಯಿಸಬೇಕೆಂದು ರಿಟ್ ಅರ್ಜಿಯನ್ನು ಹಾಕಿದ್ದರು. ಉಚ್ಚ ನ್ಯಾಯಾಲಯವು 10.6.85ರಂದು ಈ ಅರ್ಜಿಯನ್ನು ವಜಾಮಾಡಿದೆ. ಹಾಗಿದ್ದರೂ ಯಶವಂತಪುರ ಆರಕ್ಷಕ ಠಾಣೆಗೆ ಯಾವ ಸಂಬಂಧವೂ ಇಲ್ಲದಿರುವ ಮಲ್ಲೇಶ್ವರ ಎಸಿಪಿ,ಯವರಿಗೆ ಈ ಪ್ರಕರಣವನ್ನು ವರ್ಗಾಯಿಸಲಾಗಿದೆ. ಚಂದ್ರಶೇಖರ್‌ರವರ ಮೇಲೆ ಈ ಕೆಳಕಂಡಂತೆ ನಾಲ್ಕು ಪ್ರಕರಣಗಳು ದಾಖಲಾಗಿದೆ.

1) ಅಪರಾಧ ಸಂಖ್ಯೆ 79, 84 ಭಾರತೀಯ ದಂಡ ಸಂಹಿತೆ 34 ಕಲಂ 341, 324, 307, 394.

2) ಅಪರಾಧ ಸಂಖ್ಯೆ. 191:85 ಭಾರತೀಯ ದಂಡ ಸಂಹಿತೆ ಕಲಂ 332, 341, 506.

3) ಅಪರಾಧ ಸಂಖ್ಯೆ 193:85 ಭಾರತೀಯ ದಂಡ ಸಂಹಿತೆ ಕಲಂ ದಿನಾಂಕ 20-4-85.

4) ಅಪರಾಧ ಸಂಖ್ಯೆ 201:85 ಕಲಂ 107.

ಈ ಪ್ರಕರಣಗಳೆಲ್ಲವೂ ಇನ್ನೂ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಉಳಿದಿವೆ.

ನಿಯಮ 334ರ ಮೇರೆಗೆ

ವಿಷಯ : ಲೋಕೋಪಯೋಗಿ ಇಲಾಖೆಯ ಕಾರ್ಮಿಕರನ್ನು ತೆಗೆದಿರುವ ಬಗ್ಗೆ.

ಶ್ರೀ ಎಂ. ಎಸ್, ಕೃಷ್ಣನ್.—ಮಾನ್ಯ ಅಧ್ಯಕ್ಷರೇ ನಾನು ನಿಯಮ 334ರ ಮೇರೆಗೆ ನೋಟೀಸ್ ಕಳುಹಿಸಿಕೊಟ್ಟಿದ್ದೆ. ಅದು ಬಹಳ ಮುಖ್ಯವಾದ ವಿಚಾರವಾಗಿರುತ್ತದೆ. 5 ಸಾವಿರ ಲೋಕೋಪಯೋಗಿ ಇಲಾಖೆಯ ಕಾರ್ಮಿಕರ ವಿಚಾರ. ಅವರು ವಿವಿಧ ಭಾಗಗಳಿಂದ ಅಂದರೆ ಬಿಜಾಪುರ, ಗುಲ್ಬರ್ಗ ಕೋಲಾರ ಹೀಗೆ ಎಲ್ಲ ಕಡೆಯಿಂದಲೂ ಬಂದಿರುತ್ತಾರೆ. ಪಿಕೆಟಿಂಗ್ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರುಗಳಾದ ಪಂಪಾಪತಿ ಮತ್ತು ಭೂಪತಿಯವರು ಅರೆಸ್ಟ್ ಆಗುವಂತ ಪರಿಸ್ಥಿತಿ ಇರುತ್ತದೆ

ಅಧ್ಯಕ್ಷರು.—ನಾಳೆ ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಸ್ವಲ್ಪ ಕಾಳಜಿ ವಹಿಸಿದ್ದೀರಿ. ಇನ್ನೂ ಸ್ವಲ್ಪ ಕಾಳಜಿ ವಹಿಸಬೇಕು, ಏತಕ್ಕೆಂದರೆ ಇದು ಹತ್ತು ಸಾವಿರ ಜನಕ್ಕೂ ಮೇಲ್ಪಟ್ಟು ಉದ್ಯೋಗ ಕಳೆದುಕೊಳ್ಳುತ್ತಿರತಕ್ಕಂಥವರ ವಿಚಾರ. ಮುಖ್ಯವಾಗಿ ನಾನು ದೇವೇಗೌಡನು ಇದರ ಬಗ್ಗೆ ಹೇಳಬೇಕು, ಇದರ ಬಗ್ಗೆ ಅವರಿಗೆ ಕರತಲಾಮಲಕವಾಗಿ ಬಿಟ್ಟಿದೆ. ಈಗಾಗಲೇ ಈ ಮನೆಯಲ್ಲಿ ಅನೇಕ ಬಾರಿ ಮಾತನಾಡಿದ್ದೇವೆ.